JUNE 16, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

ರೋಗಿಗಳ ಆರೋಗ್ಯ ರಕ್ಷಣೆ ಜೊತೆಯಲ್ಲಿ, ವೈದ್ಯರು ಕಾನೂನಾತ್ಮಕವಾಗಿ ಸ್ವಯಂ ರಕ್ಷಣೆಗೂ, ಆದ್ಯತೆ ನೀಡಬೇಕು ಎಂದು ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಖಾತೆ ಸಚಿವ ಎಚ್. ಕೆ. ಪಾಟೀಲ ಹೇಳಿದ್ದಾರೆ. ಗದಗ ನಗರದ ಕೆ. ಎಚ್ ಪಾಟೀಲ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಸಭಾಂಗಣದಲ್ಲಿ ಜರುಗಿದ, ರಾಜ್ಯ ಮಟ್ಟದ 'ವೈದ್ಯಕೀಯ–ಕಾನೂನು' ವಾರ್ಷಿಕ ಸಮ್ಮೇಳನದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಸಾಮಾಜಿಕ ಹೊಣೆಗಾರಿಕೆಯ ಜೊತೆಯಲ್ಲಿ ವೈದ್ಯರಿಗೆ ಕಾನೂನು ಮಾಹಿತಿ ನೀಡುವಲ್ಲಿ ಇಂತಹ ಸಮ್ಮೇಳನಗಳು ಸಹಕಾರಿಯಾಗಿವೆ ಎಂದರು. ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ ವೈದ್ಯರು ಮೇಡಿಕೋ–ಲೀಗಲ್ ಕಾನ್‌ಕ್ಲೇವ್ ನಲ್ಲಿ ಭಾಗವಹಿಸಿದ್ದರು.

<><><>

ವೈದ್ಯಕೀಯ ಶಿಕ್ಷಣ ಪ್ರವೇಶಾತಿಯ, ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ–'ನೀಟ್' ನಲ್ಲಿ, ಕೊಡಗು ಜಿಲ್ಲೆ, ಸೋಮವಾರಪೇಟೆಯ ನಿಧಿ.ಕೆ.ಜಿ ಅವರು ರಾ ್ಟ್ರ ಮಟ್ಟದಲ್ಲಿ **84** ನೇ ರ‍್ಯಾಂಕ್ ಹಾಗೂ ರಾಜ್ಯಕ್ಕೆ **7** ನೇ ರ‍್ಯಾಂಕ್ ಗಳಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಎಕ್ಸ್ ಪರ್ಟ್ ಕಾಲೇಜು ವಿದ್ಯಾರ್ಥಿನಿಯಾಗಿರುವ ಅವರು ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಧ್ವನಿ: ಕೆ.ಜಿ ನಿಧಿ **38** ಸೆಕೆಂದುಗಳು

<><><>

ಧಾರವಾಡ ನಗರದ ದಕ್ಷ ಶ್ರೀಕಂಠ ರಾಮನಗೌಡರ ನೀಟ್ ರ‍್ಯಾಂಕಿಂಗ್‌ನಲ್ಲಿ **318** ನೇ ಸ್ಥಾನ ಹಾಗೂ ಅವರ ಸಹೋದರ ವಿಶ್ವಾರಾಧ್ಯ ಪ್ರಕಾಶ ರಾಮನಗೌಡರ **1** ಸಾವಿರದ **549** ನೇ ರ‍್ಯಾಂಕ್ ಗಳಿಸಿದ್ದಾರೆ.

<><><>

ಕರ್ನಾಟಕ ರಾಜ್ಯವು, ಹೂಡಿಕೆ, ತಂತ್ರಜ್ಞಾನ ಹಾಗೂ ನಾಯಕತ್ವದ ಮೂಲಕ ದೇಶದ, ಜಾಗತಿಕ ಸಾಮರ್ಥ್ಯ ಕೇಂದ್ರವಾಗಿದೆ. ವಿವಿಧ ಸೇವೆಗಳನ್ನು ನೀಡುತ್ತಿರುವ ಬಹುರಾಷ್ಟ್ರೀಯ ಕಂಪೆನಿಗಳ ಶೇಕಡ **35** ರಷ್ಟು ವೃತ್ತಿಪರರು ರಾಜ್ಯದಲ್ಲಿದ್ದಾರೆ ಎಂದು ಐಟಿ, ಬಿಟಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆ ಸಚಿವ ಪ್ರಿಯಾಂಕ ಖರ್ಗೆ ಹೇಳಿದ್ದಾರೆ. ತಮ್ಮ

ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಸರ್ಕಾರದ ಉದ್ಯಮ ಸ್ನೇಹಿ ನೀತಿಗಳಿಂದ, ಮೈಸೂರು, ಮಂಗಳೂರು, ಹುಬ್ಬಳ್ಳಿ ಹಾಗೂ ತುಮಕೂರು ನಂತಹ ದ್ವಿತೀಯ ದರ್ಜೆ ನಗರಗಳಲ್ಲೂ ಬೃಹತ್ ಹೂಡಿಕೆಗಳಿಗೆ ಅವಕಾಶ ಕಲ್ಪಿಸಲಾಗಿದೆ ಎಂದರು.

<><><>

ಮೆಟ್ರೋ ನಿಲ್ದಾಣಕ್ಕೆ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರ ಹೆಸರನ್ನು ಇಡುವ ಬಗ್ಗೆ ಸಂಸದೀಯ ಸಮಿತಿ ಸಭೆಯಲ್ಲಿ ಚರ್ಚಿಸಿ, ತೀರ್ಮಾನಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಬೆಂಗಳೂರು, ವಸಂತನಗರದ ಕೊಡವ ಸಭಾಂಗಣದಲ್ಲಿ, ಕೊಡವ ಸಮಾಜದಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು. ಉತ್ತಮ ಸಂಸದೀಯ ಪಟುಗಳಾಗಿದ್ದ ಎ.ಕೆ ಸುಬ್ಬಯ್ಯ ಹಾಗೂ ಎಂ.ಸಿ ನಾಣಯ್ಯ ಅವರು ಭಾವಿ ರಾಜಕಾರಣಿಗಳಿಗೆ ಮಾದರಿಯಾಗಿದ್ದಾರೆ. ದೇಶದ ಸೈನ್ಯ, ಕ್ರೀಡೆ, ರಾಜಕಾರಣಕ್ಕೆ ಕೊಡವರ ಕೊಡುಗೆ ಅಪಾರವಾಗಿದೆ ಎಂದರು.

<><><>

ಇಂದು ದಾವಣಗೆರೆಗೆ ಜಿಲ್ಲಾ ಪ್ರವಾಸ ಕೈಗೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದಿರಾ ಕ್ಯಾಂಟಿನ್, ಪ್ರಧಾನ ಮಂತ್ರಿ ಅವಾಸ್ ಯೋಜನೆಯಡಿ ಮನೆಗಳ ನಿರ್ಮಾಣ ಸೇರಿದಂತೆ ಸಾವಿರದ 350 ಕೋಟಿ ರೂಪಾಯಿ ಮೊತ್ತದ, ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ, ಚಾಲನೆ ನೀಡಲಿದ್ದಾರೆ.

<><><>

ಬೀದರ್ ಜಿಲ್ಲೆಯಾದ್ಯಂತ, ಬೇಡಿಕೆಗೆ ಅನುಗುಣವಾಗಿ ಸೋಯಾಬೀನ್ ಬಿತ್ತನೆ ಬೀಜ ಪೂರೈಕೆ ಮಾಡಲಾಗುತ್ತಿದ್ದು, ರೈತರು ಆತಂಕ ಪಡುವ ಅಗತ್ಯವಿಲ್ಲ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ. ಉತ್ತಮ ಮುಂಗಾರು ಮಳೆ ಹಿನ್ನೆಲೆ, ಸೋಯಾಬಿನ್ ಬಿತ್ತನೆ ಬೀಜಕ್ಕೆ ಬೇಡಿಕೆ ಹೆಚ್ಚಾಗಿದೆ. ಪ್ರಸಕ್ತ ಸಾಲಿನಲ್ಲಿ ಮಂಜೂರಾದ 1 ಲಕ್ಷದ 2 ಸಾವಿರದ 500 ಕ್ವಿಂಟಾಲ್ ಸೋಯಾಬೀನ್ ಬಿತ್ತನೆ ಬೀಜದಲ್ಲಿ, ಈಗಾಗಲೇ 87 ಸಾವಿರದ 500 ಕ್ವಿಂಟಾಲ್ ವಿತರಣೆ ಮಾಡಲಾಗಿದೆ. ಹೆಚ್ಚುವರಿ 15 ಸಾವಿರ ಕ್ವಿಂಟಾಲ್ ಸೋಯಾಬೀನ್ ಬಿತ್ತನೆ ಬೀಜ ಜಿಲ್ಲೆಗೆ ರವಾನಿಸಲಾಗುತ್ತಿದ್ದು, ರೈತರಿಗೆ ಲಭ್ಯವಾಗಲಿದೆ ಎಂದರು.

<><><>

ಗದಗ, ಬಿ.ಡಿ. ತಟ್ಟಿ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ ಸಂಚಾಲಿತ, 'ಏಕ್ ಪ್ರಯಾಸ್' ವಿಶೇ ' ಮಕ್ಕಳ ಕಲಿಕಾ ಕೇಂದ್ರದಲ್ಲಿ, ಜಿಮ್ಸ್ ಆಸ್ಪತ್ರೆ ಮನೋ ಆರೋಗ್ಯ ತಜ್ಞ ಡಾಕ್ಟರ್ ಸೋಮಶೇಖರ ಬಿಜ್ಜಳ, ಮಕ್ಕಳೊಂದಿಗೆ ಸಸಿ ನೆಟ್ಟರು.

<><><>

ಬೀದರ ನಗರದ, ಡಾಕ್ಟರ ಚನ್ನಬಸವ ಪಟ್ಟದ್ದೇವರು, ರಂಗ ಮಂದಿರದಲ್ಲಿ ರಾಜಮಾತಾ ಪುಣ್ಯಶ್ಲೋಕ ಅಹಿಲ್ಯಾ ದೇವಿ ಹೊಳ್ಕರ ಅವರ 300ನೇ ಜಯಂತಿ ಸಮಾರಂಭ ಜರುಗಿತು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.